ದಿನಾಂಕ:18-07-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎನ್ ಸಿ ವಕೀಲರಿಂದಃ

6. ನಿಮ್ಮ ಮನೆತನದ 12 ಎಕರೆ ಜಮೀನಿನ ಬಗ್ಗೆ ಆರ್ ಟಿ ಸಿ ಯನ್ನು ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ. ಸದರಿ ಜಮೀನಿನ ಉತ್ಪನ್ನ ಎಷ್ಟು ಬರುತ್ತದೆ ಎನ್ನುವ ಬಗ್ಗೆ ದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ. ದಾವಾ ಜಮೀನಿನಲ್ಲಿ ಕಂಟಿ ಬೆಳೆದಿರುತ್ತದೆ ಮತ್ತು ಪೈಪಲೈನ ಇರುವುದಿಲ್ಲ ಎಂದು ಹೇಳಿರುವ ಬಗ್ಗೆ ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಿ ಪರೀಶಿಲಿಸಲು ನಿಮ್ಮ ತಕರಾರು ಇರುವುದಿಲ್ಲ ಎಂದರೆ ಸರಿ. ಸಿದ್ದಪ್ಪ ರವರ ಆಸ್ತಿ ನಮ್ಮ ಆಸ್ತಿಯ ಉತ್ತರಕ್ಕೆ ಬರುತ್ತದೆ ಎಂದರೆ ಸರಿ. ಸಿದ್ದಪ್ಪ ರವರ ಸಹೋದರ ಅಪ್ಪಾಯಪ್ಪ ಜಮೀನು ಸಿದ್ದಪ್ಪ ರವರ ಜಮೀನಿನ ಉತ್ತರಕ್ಕೆ ಬರುತ್ತದೆ ಎಂದರೆ ಸರಿ. ಸದರಿ ಅಪ್ಪಾಯಪ್ಪ ರವರು ತಮ್ಮ ಜಮೀನಿನಲ್ಲಿ ಕಟ್ಟಡವನ್ನು ಕಟ್ಟುತ್ತಿದ್ದಾರೆ ಎಂದರೆ ಸರಿ. ಗೋಕಾಕ ಉದಗಟ್ಟಿ ರಸ್ತೆಗೆ ಹೊಂದಿಕೊಂಡಂತೆ ದಾವಾ ಆಸ್ತಿ ಇರುತ್ತದೆ ಎಂದರೆ ಸರಿ. ರಸ್ತೆಗೆ ಹೊಂದಿಕೊಂಡಂತೆ ಪೆಟ್ರೋಲ ಬಂಕ್, ಪೈಪ ಅಂಗಡಿ, ಗಾಣದಎಣ್ಣೆ ಕಾರ್ಖಾನೆ ಇರುತ್ತದೆ ಎಂದರೆ ಪೆಟ್ರೋಲ ಬಂಕ್ ಮತ್ತು ಕಾರ್ಖಾನೆ ಕೌಜಲಗಿ ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ. ದಾವಾ ಆಸ್ತಿ ಪಕ್ಕ ಯಾವುದೇ ಅಂಗಡಿ ಇರುವುದಿಲ್ಲ. ಗೋಕಾಕ ಉದಗಟ್ಟಿಗೆ ಪೆಟ್ರೋಲ ಬಂಕ್, ಪೈಪ ಅಂಗಡಿ, ಗಾಣದಎಣ್ಣೆ ಕಾರ್ಖಾನೆ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

7. ಸಿದ್ದಪ್ಪ ರವರಿಗೆ ಇಬ್ಬರೂ ಹೆಣ್ಣುಮಕ್ಕಳು ಇದ್ದು, ಅವರಿಗೆ ಮದುವೆಯಾಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಗೂ ಇಬ್ಬರೂ ಹೆಣ್ಣುಮಕ್ಕಳು ಇದ್ದಾರೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಗಳಾದ ಪದ್ಮಾವರವರನ್ನು

ಉದಗಟ್ಟಿ ಗ್ರಾಮದಲ್ಲಿಯೇ ಮದುವೆ ಮಾಡಿಕೊಡಲಾಗಿದೆ ಎಂದರೆ ಗೊತ್ತಿಲ್ಲ. ಇನ್ನೊಬ್ಬ ಹೆಣ್ಣುಮಗಳನ್ನು ರಾಯಭಾಗ ತಾಲ್ಲೂಕಿನ ಲಾಳಿ ಮನೆತನಕ್ಕೆ ಕೊಟ್ಟರುತ್ತಾರೆ ಎಂದರೆ ಗೊತ್ತಿಲ್ಲ. ಸದರಿಯವರು ದಾವಾ ಆಸ್ತಿಯಲ್ಲಿ ಪಾಲನ್ನು ಕೋರಿ ಓ ಎಸ್ 190/2023 ಮತ್ತು ಓ ಎಸ್ ನಂ.197/2023 ರಂತೆ ದಾವೆಗಳನ್ನು ಸಲ್ಲಿಸಿದ್ದು, ಅದರಲ್ಲಿ ನಾನು ಸಹ ಪಕ್ಷಗಾರನಿದ್ದೆ ಎಂದರೆ ಓ ಎಸ್ ನಂ.197/2023 ರ ನೋಟಿಸು ಜಾರಿಯಾಗಿರುತ್ತದೆ. ಇನ್ನೊಂದು ದಾವೆ ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಓ ಎಸ್ ನಂ.197/2023 ರಲ್ಲಿ ನೋಟಿಸು ಬಂದ ನಂತರ 1 ನೇ ಪ್ರತಿವಾದಿಯ ಹೆಣ್ಣುಮಕ್ಕಳ ಬಗ್ಗೆ ಗೊತ್ತಾಗಿರುತ್ತದೆ. ಪ್ರತಿವಾದಿ 1 ಮತ್ತು ಸಿದ್ದಪ್ಪ ರವರಿಗೆ ಹೆಣ್ಣುಮಕ್ಕಳು ಇರುವ ಬಗ್ಗೆ ಗೊತ್ತಿದ್ದರೂ ಸಹ ಅವರನ್ನು ಬಿಟ್ಟು ಕ್ರಯದ ಕರಾರು ಪತ್ರವನ್ನು ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯ ಹೆಣ್ಣುಮಕ್ಕಳಿಗೆ ತಲಾ 1/4 ನೇ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3 ರವರಿಗೂ ಸಹ ದಾವಾ ಆಸ್ತಿಯಲ್ಲಿ 1/7 ನೇ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಿರುವ ವಿಚಾರ ನಿಮಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಪ್ರತಿವಾದಿ 1 ರಿಂದ 3, 8 ಮತ್ತು ಮೃತ ಲಕ್ಷ್ಮಣ ರವರು ಒಬ್ಬ ಹಿರಿಯರೊಂದಿಗೆ ನಮ್ಮ ಮನೆಗೆ ಬಂದು ಜಮೀನನ್ನು ಮಾರಾಟ ಮಾಡುವ ವಿಚಾರವನ್ನು ತಿಳಿಸಿರುತ್ತಾರೆ. ದಿಃ26/6/2020 ರಂದು ಸದರಿಯವರುಗಳು ನಮ್ಮ ಮನೆಗೆ ಬಂದಿದ್ದರು. ಆಗ ಬೆಳಿಗ್ಗೆ ಸುಮಾರು 9.00 ಗಂಟೆ ಆಗಿತ್ತು. ಸದರಿ ದಿನಾಂಕದಂದು ಯಾವುದೇ ಮಾತುಕತೆ ಆಗಿರುವುದಿಲ್ಲ. ಮನೆಯಲ್ಲಿ ವಿಚಾರ ಮಾಡಿ ಹೇಳುತ್ತೇನೆಂದು ಹೇಳಿರುತ್ತೇನೆ. ಅದೇ ದಿನ ಸಂಜೆ ಕರೆ ಮಾಡಿ ದಿಃ28/06/2020 ರಂದು ಮಾತುಕತೆಗೆ ಸೇರೋಣ ಎಂದು ತಿಳಿಸಿರುತ್ತಾರೆ.

ದಿಃ28/6/2020 ರಂದು ಊರಿನಲ್ಲಿರುವ ಗುಡ್ಡದ ಮೇಲಿರುವ ಗುರುಸಿದ್ದೇಶ್ವರ ದೇವಸ್ಥಾನದಲ್ಲಿ ಮಾತುಕತೆಯಾಗಿರುತ್ತದೆ. ಸದರಿ ವಿಚಾರವನ್ನು ದಾವೆಯನ್ನು ಸಲ್ಲಿಸುವ ಕಾಲಕ್ಕೆ ನಿಮ್ಮ ವಕೀಲರಿಗೆ ತಿಳಿಸಿರುತ್ತಿರಾ ಎಂದರೆ ತಿಳಿಸಿರುತ್ತೇನೆ. ವಾದಪತ್ರವನ್ನು ನನ್ನ ವಕೀಲರು ಓದಿ ತಿಳಿಸಿರುತ್ತಾರೆ. ಸದರಿ ವಿಚಾರ ವಾದಪತ್ರದಲ್ಲಿ ನಮೂದಾಗಿತ್ತೇ ಎಂದರೆ ನಮೂದಾಗಿರಲಿಲ್ಲ. ಸದರಿ ಸಂದರ್ಭದಲ್ಲಿ ಮೇಲೆ ಹೇಳಿದ ವಿಚಾರವನ್ನು ನಮೂದಿಸಲು ವಕೀಲರಿಗೆ ತಿಳಿಸಿಲ್ಲವೇ ಎಂದರೆ ತಿಳಿಸಿರುವುದಿಲ್ಲ. ಸದರಿ ವಿಚಾರವನ್ನು ನಮೂದಿಸುವಂತೆ ತಿಳಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಆ ದಿನ ಮಾತುಕತೆಯಲ್ಲಿ ನಾನು, ನನ್ನ ತಂದೆ, ನನ್ನ ಸಹೋದರರಾದ ಮುತ್ತೆಪ್ಪ ಅರ್ಜುನ ಗುದ್ಲಿ, ಮಹಾಂತೇಶ ಅರ್ಜುನ ಗುದ್ಲಿ, ನನ್ನ ಚಿಕ್ಕಪ್ಪ ಶಿವರಾಯಪ್ಪ ಬಸಲಿಂಗಪ್ಪ ಗುದ್ಲಿ ಮತ್ತು ಹಿರಿಯರರಾದ ಮಲಕಾರಿ ಭೀಮಪ್ಪ ವಡೇರ, ಶಂಕರ ಮುತ್ತೆಪ್ಪ ವಡೇರ, ಸಿದ್ದಪ್ಪ ಕರೆಪ್ಪ ಕಳ್ಳಿಗುದ್ದಿ ಮತ್ತು ಪ್ರತಿವಾದಿಗಳು 1 ರಿಂದ 3, 8 ಮತ್ತು ಮೃತ ಲಕ್ಷ್ಮಣ ಹಾಜರಿದ್ದರು.

9. ನಮ್ಮ ಊರಿನಲ್ಲಿ ಹಿರಿತನ ಮಾಡುವವರು ಎಂದರೆ ಭೂತಪ್ಪ ಗೊಡೇರ, ಕೊಪ್ಪದ ರವರು ಮಾಡುತ್ತಾರೆ ಎಂದರೆ ಸರಿ. ಮಲ್ಲಿಕಾರ್ಜುನ ವಡೇರವರು ಮಾಡುತ್ತಾರೆ. ಪ್ರತಿವಾದಿಗಳು 1 ಎಕರೆ ಹೊಲಕ್ಕೆ 10 ಲಕ್ಷ ಎಂದು ಹೇಳಿರುತ್ತಾರೆ. ನಾವು 5 ಲಕ್ಷಕ್ಕೆ ಕೇಳಿರುತ್ತೇವೆ. ಹಿರಿಯರು 8 ಲಕ್ಷ ಎಕರೆಯಂತೆ ಬೆಲೆ ನಿಗದಿಪಡಿಸಿರುತ್ತಾರೆ. ಆ ದಿನ ಯಾವುದೇ ಮುಂಗಡ ಹಣ ಅಥವಾ ಕಾಗದವನ್ನು ಬರೆದಿಲ್ಲ ಎಂದರೆ ಸರಿ. ದಿಃ4/6/2020 ರಂದು ಕರಾರು ಪತ್ರವನ್ನು ಬರೆಸಿರುತ್ತೇವೆ. ಮಾತುಕತೆಯ ದಿನ ಮುಂಗಡವನ್ನು ಪಾವತಿಸಲು ಮತ್ತು ಕಾಗದಪತ್ರವನ್ನು ಬರೆಯಲು ತೊಂದರೆ ಇತ್ತೇ ಎಂದರೆ ಚೆನ್ನಾಗಿರುವ ದಿನ ನೋಡಿ ಕಾಗದಪತ್ರವನ್ನು ಬರೆಸಿಕೊಳ್ಳೋಣ ಎಂದು ಮತ್ತು ಮುಂಗಡ ಹಣವನ್ನು ನೀಡಿರುವುದಿಲ್ಲ.

ದಿಃ4/6/2020 ರಂದು ದೂರವಾಣಿ ಕರೆ ಮಾಡಿ ಕರಾರು ಪತ್ರ ಬರೆಸಿಕೊಳ್ಳಲು ಬರುವಂತೆ ಪ್ರತಿವಾದಿಗಳು ತಿಳಿಸಿರುತ್ತಾರೆ. ಅದರಂತೆ ನಾನು ಮತ್ತು ನನ್ನ ಸಹೋದರ ಬಂದಿರುತ್ತೇವೆ. ಆ ದಿನ 9.30 ವರೆ ಬಂದಿರುತ್ತೇವೆ. ಆ ಸಮಯದಲ್ಲಿ ಪತ್ರಬರಹಗಾರು ಬಂದಿದ್ದರೇ ಎಂದರೆ ಬಂದಿರಲಿಲ್ಲ. ಸದರಿಯವರು ಆ ದಿನ 10.00 ಗಂಟೆಗೆ ಬಂದಿರುತ್ತಾರೆ. ಆ ದಿನ ಪತ್ರವನ್ನು ಬರೆಸಲು ನಮ್ಮಂತೆ ಬೇರೆಯವರು ಬಂದಿದ್ದರು. ನನಗೆ ಅವರು ಪರಿಚಯ ಇರುವುದಿಲ್ಲ. 15 ಲಕ್ಷ ಹಣವನ್ನು ಎಲ್ಲಿ ಕೊಟ್ಟಿರುತ್ತಿರಿ ಎಂದರೆ ಗೋಟಡಕಿ ರವರು ಕಚೇರಿಯಲ್ಲಿ ನೀಡಿರುತ್ತೇವೆ. 15 ಲಕ್ಷ ಹಣವನ್ನು ಎಲ್ಲಿಂದ ತಂದಿರುತ್ತಿರಿ ಎಂದರೆ ಪ್ರತಿ ವರ್ಷ ಕಬ್ಬಿನ ಹಣ ಬರುತ್ತದೆ ಅದನ್ನು ಮನೆಯಲ್ಲಿ ಕೂಡಿ ಇಟ್ಟಿದ್ದೆ ಅದನ್ನು ತಂದಿರುತ್ತೇನೆ. ಯಾವ ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡಲಾಗುತ್ತದೆ ಎಂದರೆ ಸತೀಶ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಲಾಗುತ್ತದೆ. 2020 ರಲ್ಲಿ ಎಷ್ಟು ಕಬ್ಬು ಟನ್ ಕಾರ್ಖಾನೆಗೆ ಕಳುಹಿಸಲಾಗಿತ್ತು ಎಂದರೆ 300 ಟನ್ ಕಬ್ಬನ್ನು ಕಳುಹಿಸಲಾಗಿತ್ತು. 2020 ಕ್ಕಿಂತ ಪೂರ್ವದಲ್ಲಿ ಕಬ್ಬಿನ ಹಣವನ್ನು ಎಷ್ಟು ಕೂಡಿಸಿ ಇಟ್ಟಿದ್ದಿರಿ ಎಂದರೆ ಗೊತ್ತಿಲ್ಲ. ಸದರಿ ವ್ಯವಹಾರವನ್ನು ನನ್ನ ಅಣ್ಣ ನೋಡಿಕೊಳ್ಳುತ್ತಿದ್ದರು. ಸತೀಶ ಸಕ್ಕರೆ ಕಾರ್ಖಾನೆಯವರು ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡುತ್ತಾರೋ ಅಥವಾ ನಗದಾಗಿ ಕೊಡುತ್ತಾರೋ ಎಂದರೆ ಬ್ಯಾಂಕಿಗೆ ಜಮಾ ಮಾಡುತ್ತಾರೆ. ಕಬ್ಬಿನ ಬಿಲ್ಲು ಯಾರ ಬ್ಯಾಂಕಿನ ಖಾತೆಗೆ ಜಮಾ ಆಗುತ್ತದೆ ಎಂದರೆ ನನ್ನ ಅಣ್ಣ ಮತ್ತು ನನ್ನ ತಂದೆಯ ಖಾತೆಗಳಿಗೆ ಜಮಾ ಆಗುತ್ತದೆ. ಯಾವ ಯಾವ ವರ್ಷ ಎಷ್ಟೇಷ್ಟು ಕಬ್ಬಿನ ಹಣವನ್ನು ನನ್ನ ತಂದೆ ಮತ್ತು ಅಣ್ಣ ನಗಧಿಕರಿಸಿಕೊಂಡು ಮನೆಗೆ ತಂದಿರುತ್ತಾರೆ ಎಂದು ಹೇಳಲು ಬರುತ್ತದೆಯೇ ಎಂದರೆ ನೆನಪಿಲ್ಲ. 15 ಲಕ್ಷ ಹಣವನ್ನು ಯಾವ ಕಾರಣಕ್ಕಾಗಿ ಮನೆಯಲ್ಲಿ ಇಟ್ಟುಕೊಂಡಿರುತ್ತಿರಿ ಎಂದರೆ ಹೊಲ ಖರೀದಿಸಲು ಅಥವಾ ಮನೆಯ ಅವಶ್ಯಕತೆಗಳಿಗಾಗಿ ಹಣ ಬೇಕಾಗುತ್ತದೆ ಎಂದು ಮನೆಯಲ್ಲಿ ಇಟ್ಟಿರುತ್ತೇವೆ. 15 ಲಕ್ಷ ಹಣವನ್ನು ನಗಧಿಕರಿಸಿದ ಬಗ್ಗೆ ನಿಮ್ಮ ಸಹೋದರನ ಖಾತೆಗೆ

ಸಕ್ಕರೆ ಕಾರ್ಖಾನೆಯವರು ಜಮಾ ಮಾಡಿದ ಬಗ್ಗೆ ದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ವಕೀಲರಿಗೆ ನೀಡಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯವನ್ನು ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶ್ರೀಮತಿ ದೀಪಾ ಜಿ.)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ